ಓಎಸ್ : 128 /2014 ಡಿ ಡಬ್ಲ್ಯೂ: 1

**ಸಾಕ್ಷಿಯನ್ನು ದಿಃ 01.07.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು ಃ ವಾದಿ ಪರ ಶ್ರೀ ಎ.ವಿ.ಜೆ ವಕೀಲರಿಂದಃ

ನಮ್ಮ ತಂದೆ ವಿ.ಶ್ರೀನಿವಾಸ್ ರವರು ಎಸ್ ವೆಂಕಟರಾಮಯ್ಯ ರವರ ಮಗ ಇರುತ್ತಾರೆ. ಎಸ್ ವೆಂಕಟರಾಮಯ್ಯರವರು ಶಾನುಬೋಗರಾಗಿದ್ದರು. ವೆಂಕಟರಾಮಯ್ಯರವರು ಶ್ರೀರಾಂಪುರದಲ್ಲಿ ಶಾನುಬೋಗರಾಗಿದ್ದರು ಎಂದರೆ ಸರಿಯಲ್ಲ. ನಿಂಗಮ್ಮ ರವರು ಪುಟ್ಟೇಗೌಡರ ಹೆಂಡತಿ ಇರುತ್ತಾರೆ ಎಂದರೆ ಸರಿ. ಪುಟ್ಟೇಗೌಡ ಜೋಗೇಗೌಡರ ಮಗ ಇರುತ್ತಾರೆ. ಜೋಗೇಗೌಡರಿಂದ ನಿಂಗಮ್ಮರವರಿಗೆ ವ್ಯವಸ್ಥ ಪತ್ರದ ಮೂಲಕ ಆಸ್ತಿ ಬಂದಿರುತ್ತದೆ ಸದರಿ ವ್ಯವಸ್ಥ ಪತ್ರ ಯಾವ ದಿನಾಂಕದಂದ ಬರೆಯಲಾಗಿರುತ್ತದೆ ನನಗೆ ಗೊತ್ತಿಲ್ಲ. ಸದರಿ ವ್ಯವಸ್ಥ ಪತ್ರ ನೊಂದಣಿ ವ್ಯವಸ್ಥ ಪತ್ರ ಇರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ನಾನು ನೋಡಿರುವುದಿಲ್ಲ. ನಿಂಗಮ್ಮ ಮತ್ತು ಶಿವಮ್ಮರವರಿಗೆ ನಿಡಿ. 4 ರಲ್ಲಿ ತೋರಿಸಿರುವ ಆಸ್ತಿಯ ಮೇಲೆ ಯಾವ ರೀತಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅವರಿಗೆ ಸದರಿ ಆಸ್ತಿಯ ಮೇಲೆ ಹಕ್ಕು ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ಜೋಗೇಗೌಡರು ದಿಃ 04.10.1969 ರಲ್ಲಿ ಒಂದು ಮರಣ ಶಾಸನವನ್ನು ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನದಲ್ಲಿ ಜೋಗೇಗೌಡರು ದಾವ ಸ್ವತ್ತಾದ 31 ಗುಂಟೆ ಆಸ್ತಿಯನ್ನು ಸಣ್ಣೇಗೌಡರ ಮಗ ಪುಟ್ಟೇಗೌಡರಿಗೆ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಜೋಗೇಗೌಡರವರ ಕುಟುಂಬದ ವಿಚಾರಗಳು ಗೊತ್ತಿರುವುದಿಲ್ಲ. ಆ ಸಮಯದಲ್ಲಿ ಜೋಗೇಗೌಡರಿಗೆ ದಾವ ಸ್ವತ್ತಿನ ಸರ್ವೇ ಸಂಖ್ಯೆ 197/2 ಎ ಎಂದು ಗೊತ್ತಿಲ್ಲದೆ ಇದ್ದ ಕಾರಣ ತಪ್ಪಾಗಿ 197/1 ಬಿ ಎಂದು ನಮೂದು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣಕ್ಕಾಗಿ ನಿಪಿ.13 ರ ದಾಖಲೆಯಲ್ಲಿ ಸರ್ವೆ ಸಂಖ್ಯೆ ತಪ್ಪಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸಣ್ಣೇಗೌಡ, ಪುಟ್ಟೇಗೌಡ ಮತ್ತು ಸಣ್ಣೇಗೌಡನ ಹೆಂಡತಿ ನಿಂಗಮ್ಮ ಮನ್ ಮೋಹನ್ ಲಾಲ್ ಎಂಬುವವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ

ಗೊತ್ತಿಲ್ಲ. ನಾನು ಆ ಬಗ್ಗೆ ವಿಚಾರ ಮಾಡಿರುವುದಿಲ್ಲ. ಮನ್ ಮೋಹನ್ ಲಾಲ್ ರವರು ನಿಪಿ. 14 ರಂತೆ ವ್ಯವಸ್ಥ ಪತ್ರವನ್ನು ಮಾಡಿ ಅವರ ತಮ್ಮ ವಾದಿಗೆ ದಾವ ಸ್ವತ್ತನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ ನಾವು ವಾದ ಪತ್ರದ ಕರಡು ನಕ್ಷೆಯಲ್ಲಿ ತೋರಿಸಿರುವಂತೆ ಸರ್ವೇ ನಂ. 197/1 ಬಿ ಯಲ್ಲಿ 31 ಗುಂಟೆ ಸರ್ವೇ ನಂ. 197/2 ಎ ರಲ್ಲಿ ಒಂದು ಎಕರೆ ಜಮೀನನ್ನು ಖರೀದಿಸಿರುತ್ತೇವೆ. ನಮಗೆ ಮಾರಾಟ ಮಾಡಿದ ನಿಂಗಮ್ಮ ಮತ್ತು ಶಿವಮ್ಮರವರಿಗೆ ಸರ್ವೇ ನಂ. 197/2 ಎ ರಲ್ಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 197/2 ಎ ಆಸ್ತಿಯ ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ 197/1 ಬಿ ಆಸ್ತಿ, ದಕ್ಷಿಣಕ್ಕೆ 197/2 ಬಿ, ಆಸ್ತಿ ಇರುತ್ತದೆ. ಪೂರ್ವಕ್ಕೆ ಏನು ಇರತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ನಾವು ಸರ್ವೇ ನಂ. 197/1 ಬಿ ಆಸ್ತಿ 1942-43 ರಲ್ಲಿ ಪೋಡಾಗಿರುತ್ತದೆ. ಆದರೆ ಯಾವಾಗ ಆಗಿರುತ್ತದೆ ಎಂದು ನನಗೆ ಖಚಿತವಾಗಿ ಹೇಳಲಾಗುವುದಿಲ್ಲ. ನಾನು ವಾದ ಪತ್ರದಲ್ಲಿ ಇರುವ ಕರುಡು ನಕ್ಷೆಯನ್ನು ನೋಡಿ ಅದರ ಆದಾರದ ಮೇರೆಗೆ ಯಾವ ಯಾವ ಆಸ್ತಿಯನ್ನು ನಾವು ಖರೀದಿಸಿರುತ್ತೇವೆ ಎಂದು ಹೇಳುತ್ತಿದ್ದೇನೆ. ಜೋಗೇಗೌಡರು ಜೀವಂತವಾಗಿದ್ದಾಗ ಆಸ್ತಿ ಸಂಖ್ಯೆ 197/1 ಬಿ ಮತ್ತು 197/2 ಎಂದು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೇ ಸಂಖ್ಯೆ ಯಲ್ಲಿ ಜೋಗೇಗೌಡರಿಗೆ ಒಟ್ಟು 2 ಎಕರೆ 30 ಗುಂಟೆ ಆಸ್ತಿ ಇತ್ತು ಎಂದರೆ ಸರಿ. ಜೋಗೇಗೌಡರು ಪುಟ್ಟೇಗೌಡರಿಗೆ ಸರ್ವೇ ನಂ. 197/1 ಬಿ ಯಲ್ಲಿ 1 ಎಕರೆ ಆಸ್ತಿಯನ್ನು ಪಾಲಿನಲ್ಲಿ ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 31 ಗುಂಟೆ ಜಮೀನನ್ನು ಮಾತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೇ ನಂ. 197/2 ಬಿ ಯಲ್ಲಿ ಜೋಗೇಗೌಡರು ತನ್ನ 2 ನೇ ಮಗ ಸಣ್ಣೇಗೌಡನಿಗೆ 39 ಗುಂಟೆ ಜಮೀನನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಉಳಿಕೆ 31 ಗುಂಟೆ ಜಮೀನನ್ನು ಜೋಗೇಗೌಡರು ಉಳಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವಇಚ್ಛೆಯಿಂದ ಮುಂದುವರೆದು ಮಧ್ಯದ ಒಂದು ಎಕರೆ ಜಮೀನನ್ನು ಜೋಗೇಗೌಡರು ಉಳಿಸಿಕೊಂಡಿದ್ದರು ಎಂದು ನುಡಿಯುತ್ತಾರೆ. ಸದರಿ ಮಧ್ಯದ ಜಮೀನನ್ನು ಜೋಗೇಗೌಡರು ಸರ್ವೇ ನಂ. 197/1 ಬಿ ಎಂದು ತಿಳಿದಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ಅಸಲು ಸರ್ವೇ ನಂ. 197/2 ಎ ಇತ್ತು ಎಂದರೆ ನನಗೆ

ಗೊತ್ತಿಲ್ಲ. ಸದರಿ ವಿಷಯ ನಮ್ಮ ತಾತ ವೆಂಕಟರಾಮಯ್ಯನವರು ಶಾನುಬೋಗರಾಗಿದ್ದ ಕಾರಣ ಅವರಿಗೆ ತಿಳಿದಿದ್ದ ಕಾರಣ ಅದನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜೋಗೇಗೌಡರು ಉಳಿಸಿಕೊಂಡ ಜಮೀನಿನ ಮೇಲೆ ಶಿವಮ್ಮನಿಗೆ ಮತ್ತು ಆಕೆಯ ತಾಯಿ ನಿಂಗಮ್ಮನಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಿಃ 13.04.2005 ರಂದು ನಮ್ಮ ತಂದೆ ಇಳಂಗೋವರವರಿಗೆ ಬರೆದುಕೊಟ್ಟಿರುವ ಕ್ರಯಪತ್ರ ವಾದಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 11.08.2007 ರಂದು 2 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಕ್ರಯಪತ್ರ ವಾದಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ. 14 ರ ಆಸ್ತಿ ಮತ್ತು ದಾವ ಸ್ವತ್ತು ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ,

ಸಹಿ/-
ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಸಿವಿಲ್
ನ್ಯಾಯಾಧೀಶರು (ಹಿ.ವಿ.), ಮೈಸೂರು